**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>**
**ಶ್ರೀರಂಗಪಟ್ಟಣ.**

ಸಿ.ಸಿ.ಃ 662/2014

ಪಿ. ಡಬ್ಲ್ಯುಃ 04
ಸಿ. ಡಬ್ಲ್ಯುಃ 05

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎಂ.ಕೆ.ಸಿದ್ದೇಗೌಡ |
| ತಂದೆ/ಪತಿಯ ಹೆಸರು | ಃ | ಲೇಟ್ ಕೆಂಪೇಗೌಡ |
| ವಯಸ್ಸು | ಃ | 63 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಮಹದೇವಪುರ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 18.04.2023
ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ರಿಂದ 4 ಗೊತ್ತಿಲ್ಲ. ಆರೋಪಿತರು ಗೊತ್ತಿಲ್ಲ. ಗಲಾಟೆ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೋಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

ದಿಃ 14.09.2014 ರಂದು ರಾತ್ರಿ 08.30 ಸಮಯದಲ್ಲಿ ಸೋಮಶೇಖರ ತಮ್ಮ ಮನೆಯ ಮುಂದಿನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿತರು ಆತನ ಮೇಲೆ ಗಲಾಟೆ ಮಾಡುವ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಸೋಮಶೇಖರ ಬಳಿ ಹೋಗಿದ್ದು ಮುರುಘೇಂದ್ರ ಸ್ವಾಮಿ ಸೋಮಶೇಖರ್ ನನ್ನು ನಿಲ್ಲಿಸಿ ಅಕ್ರಮ ತಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿದ್ದು ಮಹದೇವಸ್ವಾಮಿ ಸಹ ಸೋಮಶೇಖರನಿಗೆ ಅವಾಚ್ಯ ಶಬ್ದಗಳಿಂದ ಬೈದನು, ಮತ್ತು ಅಲ್ಲಿಯೇ ಬಿದಿದ್ದ ಕಾಡು ಮರದ ದೊಣ್ಣೆಯಿಂದ ಸೋಮಶೇಖರ ತಲೆಯ ಮೇಲೆ ಹೊಡೆದು ರಕ್ತಗಾಯ ಪಡಿಸಿದನು, ಮುರುಘೇಂದ್ರಸ್ವಾಮಿ ಕಬ್ಬಿಣದ ರಾಡಿನಿಂದ ಸೋಮಶೇಖರನ ತಲೆಯ ಮೇಲೆ ಹಾಗೂ ಹಿಂಭಾಗಕ್ಕೆ ಹೊಡೆದು ರಕ್ತಗಾಯ ಪಡಿಸಿದನು ಇದರಿಂದ ಸೋಮಶೇಖರ ಧರಿಸಿದ್ದ ಟಿ-ಶರ್ಟ್, ಟವಲ್ ಹಾಗೂ ಬನಿಯನ್ ಗೆ ರಕ್ತಗಾಯವಾಗಿದ್ದು, ಮಹಾಲಕ್ಷ್ಮೀ ತನ್ನ ಹಲ್ಲಿನಿಂದ ಸೋಮಶೇಖರ ನ ಬಲಗೈ

ತೋಳನ್ನು ಕಚ್ಚಿ ನೋವುಂಟು ಮಾಡಿದ್ದು ಪ್ರಮೀಳಾ ಸೋಮಶೇಖರ ಎಡ ಕೆನ್ನೆಗೆ ಮೇಲೆ ಹೊಡೆದು ನೋವುಂಟು ಮಾಡಿದ್ದು ಆಗ ಅಲ್ಲಿಯೇ ಇದ್ದ ಗವಿಸಿದ್ದು ಸಮಾಧಾನ ಪಡಿಸಿದ್ದು ನಂತರ ಮಹದೇವಸ್ವಾಮಿ ಹೆಂಡತಿ ಸುಂದರಮ್ಮ ಸೋಮಶೇಖರನಿಗೆ ಪ್ರಾಣ ಬೆದರಿಕೆ ಹಾಕಿ ದೊಣ್ಣೆ ಮತ್ತು ಕಬ್ಬಿಣದ ರಾಡನ್ನು ಮಹದೇವಸ್ವಾಮಿ ಹಾಗೂ ಮುರುಘೇಂದ್ರಸ್ವಾಮಿ ಕಿತ್ತು ಬಿಡಾಸಿ ಎಲ್ಲರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು ಮತ್ತು ರಕ್ತಗಾಯವಾಗಿದ್ದ ಸೋಮಶೇಖರ ಅವುಗಳನ್ನು ಎತ್ತಿಟ್ಟು ಅದೇ ದಿನ ನನ್ನ ಮಗ ಅನಿಲ್ ರಾಜ್ ಜೊತೆ ವಾಹನದಲ್ಲಿ ಮಂಡ್ಯದ ಜಿಲ್ಲಾಸ್ಪತ್ರೆಗೆ ಹೋಗಿ ವೈದರಿಂದ ಚಿಕಿತ್ಸೆ ಪಡೆದು ನಂತರ ಬೆಂಗಳೂರಿನ ನಿಮಾನ್ಸ ಆಸ್ಪತ್ರೆಗೆ ಹೋಗಿ ದಿಃ 15.09.2014 ರಂದು ಆರೋಪಿತರ ವಿರುದ್ದಅರಕೆರೆ ಪೋಲೀಸ್ ಠಾಣೆಗೆ ದೂರು ನೀಡಿದ ವಿಚಾರ ನನಗೆ ಗೊತ್ತಾಯಿತು ಮತ್ತು ಅದರ ಸಂಬಂಧ ನಾನು ದಿಃ 16.09.2014 ರಂದು ತನಿಖಾಧಿಕಾರಿಗೆ ನನ್ನ ಹೇಳಿಕೆಯನ್ನು ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ ------------------------------ ಆರೋಪಿಗಳು ನಮ್ಮ ಗ್ರಾಮದವರೇ ಆಗಿರುವುದರಿಂದ ನನಗೆ ಚೆನ್ನಾಗಿ ಗೊತ್ತು " ನೀಡಿದ್ದೇನು ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.